## ಮಡಿಕೆ ನೀರಿನ ಮಹತ್ವ

ಕಬ್ಬಿನ ಹಾಲು, ಶರಬತ್ತು, ಎಳನೀರು... ಇವೆಲ್ಲ ಶರೀರವನ್ನು ತಂಪು ಮಾಡುತ್ತವೆ ಅನ್ನುವ ಮಾತಿದೆ. ಅದು ಸತ್ಯವಾದರೂ ನೀರಿನಷ್ಟು ತಂಪು ಇನ್ನೊಂದಿಲ್ಲ ಅನ್ನುವುದು ವಾಸ್ತವ. ತಂಪಷ್ಟೇ ಅಲ್ಲ ಆರೋಗ್ಯಕ್ಕೂ ಹೆಚ್ಚು ಪೂರಕ. ಗಡಿನಾಡ ಶ್ರೇಯೋಭಿವೃದ್ಧಿ ಟ್ರಸ್ಟ್‌ನ ಆಡಳಿತ ಮಂಡಳಿಯು ಪಾಣಜೆ ಒಡ್ಯ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 6ನೇ ಕರ್ನಾಟಕ ಗಡಿನಾಡ ಸಮ್ಮೇಳನ ಹಮ್ಮಿಕೊಂಡಿತ್ತು. ನೀರಿನ ಮಹತ್ವ ಸಾರಲು ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಜೊತೆಗೂಡಿ ಮಡಿಕೆಗಳಲ್ಲಿ ನೀರು ತುಂಬಿಸಿ, ಪ್ರತಿ ಮಡಿಕೆಗೂ ಒಂದೊಂದು ನದಿಯ ಹೆಸರನ್ನು ಹೆಸರಿಸಿದ್ದರು. ಆ ಮೂಲಕ ನದಿಗಳ ಹಾಗೂ ನೀರಿನ ಮಹತ್ವ ಸಾರಿದರು. ಫ್ರೀಜರ್‌ನಲ್ಲಿ ಸಂಗ್ರಹಿಸಿದ ನೀರು ಹಾಗೂ ತಂಪು ಪಾನೀಯಗಳಿಗಿಂತ ಮಡಿಕೆಯಲ್ಲಿ ಶೇಖರಿಸಿದ ನೀರು ಆರೋಗ್ಯಕ್ಕೆ ಹೆಚ್ಚು ಪೂರಕ. ಹೀಗಾಗಿ, ಮಡಿಕೆ ನೀರನ್ನು ಹೆಚ್ಚಾಗಿ ಬಳಸಿ ಎಂಬ ಸಂದೇಶ ಸಾರಲಾಯಿತು.

—ಕುಮಾರ್ ಪೆರ್ನಾಜೆ, ಪುತ್ತೂರು




## ಇದು ಹೂವಲ್ಲ, ಸೋಮೆ ಕಾಯಿ

ಇತ್ತೀಚೆಗೆ ಸಂಡೂರಿನ ತಾರಾನಗರದ ಬೆಟ್ಟದಲ್ಲಿ ಚಾರಣ ಮಾಡುತ್ತಿರುವಾಗ ಕಾಣಿಸಿದ ಹೂವೊಂದು ನನ್ನ ಗಮನ ಸೆಳೆಯಿತು. ಮನೆಯ ಶೋಕೇಸ್‌ನಲ್ಲಿಡಲು ಸೂಕ್ತವಾದಂತಹ ಈ ಹೂವು ಮರದಿಂದ ತಯಾರಿಸಿದ ಹೂವಿನಂತೆ ಕಾಣುತ್ತಿತ್ತು. ಸುಮಾರು ನಾಲ್ಕು ಇಂಚು ಉದ್ದವಿದ್ದು, ಐದು ದಳಗಳನ್ನು ಹೊಂದಿತ್ತು. ಸ್ಥಳೀಯ ಕುರಿಗಾಹಿಯಲ್ಲಿ ವಿಚಾರಿಸಿದಾಗ ಇದು ಹೂವಲ್ಲ 'ಸೋಮೆ' ಮರದ ಕಾಯಿಯೆಂದು ತಿಳಿದು ಅಚ್ಚರಿಯಾಯಿತು.

'ಸೋಮಿದಾ ಫೆಬ್ರಿಫ್ಯೂಗ' (Soymida febrifuga) ಎಂದು ಸಸ್ಯ ಶಾಸ್ತ್ರದಲ್ಲಿ ಗುರುತಿಸಲ್ಪಡುವ ಈ ಮರವನ್ನು ಇಂಗ್ಲಿಷ್‌ನಲ್ಲಿ 'ಇಂಡಿಯನ್ ರೆಡ್ ವುಡ್' ಎಂದು ಕರೆದರೆ, ಕನ್ನಡದಲ್ಲಿ ಸೋಮೆ, ಸ್ವಾಮಿ, ಮಾಂಸ ರೋಹಿಣಿ ಎಂದು ಕರೆಯುತ್ತಾರೆ.

ಸುಮಾರು ನಾಲ್ಕು ಇಂಚು ಉದ್ದದ ಕಾಯಿಗಳು ಅಂಡಾಕಾರದಲ್ಲಿರುತ್ತವೆ. ಏಪ್ರಿಲ್–ಮೇ ತಿಂಗಳುಗಳಲ್ಲಿ ಕಾಯಿಗಳು ಬಲಿತಾಗ ಸದ್ದು ಮಾಡುತ್ತಲೇ ಒಡೆಯುತ್ತವೆ. ಆಗ ಬೀಜದ ಸುತ್ತಲೂ ಇರುವ ಸಿಪ್ಪೆ ಬೇರ್ಪಟ್ಟು ಹೂವಿನ ದಳಗಳಂತೆ ಕಾಣುತ್ತದೆ. ಇದರ ಮಧ್ಯದಲ್ಲಿ ಐದು ಮೂಲೆಗಳ ನಕ್ಷತ್ರದಂತೆ ಕಾಣುತ್ತಿರುವುದೇ 'ಸೋಮೆ ಬೀಜ'. ಹೀಗೆ ಕಾಯಿಯೊಂದು ಮರದಿಂದ ಮಾಡಿದ ಹೂವಿನ ರೂಪದಲ್ಲಿರುವುದು ಅಚ್ಚರಿ ಮೂಡಿಸುತ್ತದೆ.

—ಜಿ. ನಾಗೇಂದ್ರ, ಕಾವೂರು, ಸಂಡೂರು





## ಭತ್ತ ರಕ್ಷಣೆಗೆ ಮೈಕ್ ಬಳಕೆ

ಮಂಡ್ಯದ ಭತ್ತದ ಗದ್ದೆಯಲ್ಲಿ ಹಾಲು ತುಂಬಿದ ತೆನೆಗಳು ಕಾಣುವಾಗ ಹಕ್ಕಿಗಳು ಹೆಚ್ಚಾಗಿ ಗದ್ದೆಯತ್ತ ಆಕರ್ಷಿತವಾಗುತ್ತವೆ. ಕಾರಣ, ಭತ್ತದ ಹಾಲು ತುಂಬಿದ ತೆನೆಗಳಿಂದ ಹೊಟ್ಟೆ ತುಂಬಿಸಿಕೊಳ್ಳಲು. ಗದ್ದೆಗೆ ಲಗ್ಗೆ ಹಾಕುವ ಹಕ್ಕಿಗಳ ಹಿಂಡನ್ನು ಹಿಮ್ಮೆಟ್ಟಿಸಲು ರೈತರು ಡಬ್ಬ ಬಡಿದು ಶಬ್ದ ಮಾಡುತ್ತಾರೆ. ಆದರೆ ಇಲ್ಲೊಬ್ಬ ರೈತ, ಮೈಕ್ ಬಳಸುತ್ತಿದ್ದಾರೆ.

ಮಂಡ್ಯದ ಕೀಲಾರ ಗ್ರಾಮದ ಭತ್ತದ ಗದ್ದೆಯೊಂದರ ಬಳಿ 'ಹಾಹೋ..., ಡಬ್‌ಡಬ್ ರೀತಿಯ ಶಬ್ದ ಬರುತ್ತಿರುವುದನ್ನು ಕೇಳಿ ಆಶ್ಚರ್ಯದಿಂದ ವಾಹನ ನಿಲ್ಲಿಸಿದೆ. ಅಲ್ಲಿ ಯಾರೂ ಇರಲಿಲ್ಲ. ಗದ್ದೆಯ ಒಂದು ಭಾಗದಲ್ಲಿ ಮೈಕ್ ಅಳವಡಿಸಿರುವುದನ್ನು ನೋಡಿದೆ. ಆ ಮೈಕ್‌ನಿಂದ ರೆಕಾರ್ಡ್ ಮಾಡಿದ ಶಬ್ದ ಕೇಳಿ ಬರುತ್ತಿತ್ತು. ಅಷ್ಟೊತ್ತಿಗೆ ಜಮೀನಿನ ರೈತ ಬಂದು, 'ನಾನು ಇಲ್ಲದಿದ್ದರೂ ಈ ಮೈಕ್ ಹಕ್ಕಿಗಳನ್ನು ಗದ್ದೆಯತ್ತ ಸುಳಿಯುವುದನ್ನು ತಡೆಯುತ್ತಿದೆ' ಎಂದರು. ರೀಚಾರ್ಜ್ ಸೆಲ್ ಹಾಗೂ ರೆಕಾರ್ಡ್ ಚಿಪ್ ಅಳವಡಿಸಿರುವ ಆ ಮೈಕ್ ಬೆಲೆ 900 ರೂಪಾಯಿ. ಈ ಮೈಕ್‌ನಿಂದ ಹಕ್ಕಿಗಳನ್ನಷ್ಟೇ ಅಲ್ಲದೆ ಕಾಡು ಪ್ರಾಣಿ, ಕಾಡು ಹಂದಿಗಳನ್ನೂ ಬೆಳೆಯತ್ತ ಸುಳಿಯದಂತೆ ತಡೆಯಬಹುದು ಎಂಬುದು ರೈತರ ಮಾತು.

—ಸಿ. ಸಿದ್ದರಾಜು ಆಲಕೆರೆ, ಮಂಡ್ಯ